ದಿನಾಂಕಃ 22.11.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀಸವಾಲುಃ **1** ಮತ್ತು **2** ನೇ ಪ್ರತಿವಾದಿಗಳ ಪರ ವಕೀಲರಿಂದಃ

ನಾನು ಬಿಲಕುಂದಿಯಲ್ಲಿ ವಾಸವಿದ್ದೇನೆ. ಅಲ್ಲಿರುವ ಜನರೆಲ್ಲಾ ನನಗೆ ಪರಿಚಯವಿದ್ದಾರೆ. 1 ನೇ ಪ್ರತಿವಾದಿ, ಅವರ ತಾಯಿ, ಹೆಂಡತಿ ಮತ್ತು ಮಕ್ಕಳು ನನಗೆ ಪರಿಚಯವಿದ್ದಾರೆ. ಅವರ ತಂಗಿ ನನಗೆ ಪರಿಚಯವಿಲ್ಲ. ಅವರ ಆಸ್ತಿಗಳು ಕೌಜಲಗಿಯಲ್ಲಿವೆ, ಅವು ಅವರ ತಂದೆಯಿಂದ ಬಂದ ಆಸ್ತಿಗಳು ಎಂದರೆ ಸರಿ. ಈ ದಾವೆಯನ್ನು ಎಷ್ಟು ಜನರ ಮೇಲೆ ಏನು ಕೇಳಿ ಮಾಡಿದ್ದೀರಿ ಎಂದರೆ ಸಾಕ್ಷಿ 9 ಜನರ ಮೇಲೆ ಹೊಲ ಬೇಕೆಂದು ದಾವಾ ಮಾಡಿದ್ದೇನೆ. 3 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ತಂಗಿಯಾಗಬೇಕು. ಅವರ ಹೆಂಡತಿಯ ಹೆಸರು ರೇಣುಕಾ ಮತ್ತು ಅವರ ಮಕ್ಕಳು ಮತ್ತು ತಾಯಿಯ ಹೆಸರು ಹೇಳಲು ಆಗುವುದಿಲ್ಲ. 1 ನೇ ಪ್ರತಿವಾದಿಯ ತಾಯಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ದಾವೆ ಸಲ್ಲಿಸಲು ಹಾಗೂ ನಾನು 2 ಬಾರಿ ಹಾಜರು ಪಡಿಸಿರುವ ಸಾಕ್ಷ್ಯ ಪ್ರಮಾಣಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿದ್ದೇನೆ. 2 ಬಾರಿ ನೀವು ಯಾವ ಕಾರಣಕ್ಕಾಗಿ ಸಾಕ್ಷ್ಯ ಪ್ರಮಾಣಪತ್ರಗಳನ್ನು ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ನನಗೆ ಹಣ ಕೊಡಬೇಕಾಗಿತ್ತು ಅದಕ್ಕೆ ಹಾಕಿದ್ದೇನೆ ಎನ್ನುತ್ತಾರೆ. ನಾನು ದಿಃ15.07.2011 ರಲ್ಲಿ ಸಿದ್ದಪ್ಪ ಮತ್ತು ಅವರ ಹೆಂಡತಿಗೆ ಹಣ ಕೊಟ್ಟೆ, 15 ಲಕ್ಷಕ್ಕೆ ವ್ಯವಹಾರವಾಗಿತ್ತು, ಅದರಲ್ಲಿ 14 ಲಕ್ಷವನ್ನು ಸ್ವಾಮಿಗಳು ಬಾಂಡ್‌ರೈಟರ್‌ರವರ ಕೈಗೆ ಕೊಟ್ಟೆ, ಆಗ ಅಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಇದ್ದರು. ಒಬ್ಬ ಹಿರಯರು ಇದ್ದರು.

2. ಬಾಂಡ್‌ರೈಟರ್‌ರವರು ಲೆಕ್ಕ ಮಾಡಿ 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿಗೆ ಹಣ ಕೊಟ್ಟರು. ಕಾಗದವನ್ನು ಪಂಚಾಕ್ಷರಿ ಹಿರೆಮಠ್‌ರವರು ಬರೆದರು. ಆ ಕಾಗದಕ್ಕೆ ದುಂಡಪ್ಪ ಶಿವಮೂರ್ಥಿ ಇಟ್ನಾಳ್, ಶಿವಪ್ಪ ಸತ್ಯಪ್ಪ ಕಳ್ಳಿಗುದ್ದಿ ಮತ್ತು ಬಸುರವರು ಸಹಿ ಮಾಡಿದರು. ಇವರನ್ನು ಹೊರತು ಪಡಿಸಿ ಬೇರೆ ಯಾರು ಸಹಿ ಮಾಡಲಿಲ್ಲ ಎಂದರೆ ಸಾಕ್ಷಿ ಮಲ್ಲಪ್ಪ ಬಳೆಗಾರರವರು ಮಾಡಿದ್ದಾರೆ ಎನ್ನುತ್ತಾರೆ. ಸಿದ್ದಪ್ಪ ಮತ್ತು ಸಿದ್ದಪ್ಪನ

ಹೆಂಡತಿರವರು ಸಹಿ ಮಾಡಿದರು. ಸಬ್‌ರಿಜೀಸ್ಟ್ರಾರ್ ಕಛೇರಿಯಲ್ಲಿ ಸಹಿ ಮಾಡಿದರು. ಪಂಚಾಕ್ಷರಿ ಹಿರೇಮಠ್‌ರವರ ಕಛೇರಿಯಲ್ಲಿ ಯಾರು ಸಹಿ ಮಾಡಲಿಲ್ಲ. ಕಂಪ್ಯೂಟರ್ ನಲ್ಲಿ ಕಾಗದ ತಯಾರು ಮಾಡಿದ್ದಾರೆ. ಪಂಚಾಕ್ಷರಿ ಹಿರೇಮಠ್‌ರವರು ತಯಾರು ಮಾಡಿದರು. ಅವರ ಕಛೇರಿಯಲ್ಲಿ ಕಂಪ್ಯೂಟರ್ ಇದೆ. ಅದನ್ನು ಕಂಪ್ಯೂಟರ್‌ನಿಂದ ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. 11 ಎಕರೆ 17 ಗುಂಟೆ ಜಮೀನಿನ ಪೈಕಿ 6 ಎಕರೆ 8 ಗುಂಟೆಯನ್ನು ಕರಾರುಪತ್ರದಲ್ಲಿ ಬರೆದರು. 3 ವರ್ಷದ ಒಳಗೆ ನಕ್ಷೆ ತಯಾರು ಮಾಡಿ ನಿಮಗೆ ಖರೀದಿ ಮಾಡಿಕೊಡುತ್ತೇನೆ ಎಂದು ಕರಾರಿನಲ್ಲಿ ಬರೆದರು. ಉಳಿದ 1 ಲಕ್ಷ ಖರೀದಿ ಕಾಲಕ್ಕೆ ಕೊಡಬೇಕೆಂದು ಬರೆದರು.

3. 3 ವರ್ಷ ಸಮಯ ಏತಕ್ಕಾಗಿ ತೆಗೆದುಕೊಂಡರು ಎಂದರೆ ಸಾಕ್ಷಿ 11-ಇ ನಕ್ಷೆ ತಯಾರು ಮಾಡಿಸಿ ನನ್ನ ಹೆಸರಿಗೆ ಬರೆದುಕೊಡುವ ಸಲುವಾಗಿ 3 ವರ್ಷಗಳ ಕಾಲ ಬರೆದರು ಎನ್ನುತ್ತಾರೆ. ಈ ಎಲ್ಲಾ ವಿಚಾರಗಳನ್ನು ಸಿದ್ದಪ್ಪನವರೇ ಹಿರೇಮಠ್‌ರವರಿಗೆ ಹೇಳಿ ಬರೆಸಿದ್ದಾರೆ. 2011ರಲ್ಲಿ ನಾನು ಮಾಡಿಕೊಂಡ ಕರಾರಿನಲ್ಲಿ ಈ ರೀತಿ ನಕ್ಷೆ ಮಾಡಿಕೊಡುವ ವಿಚಾರ ಬರೆದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಬರೆಸಿಲ್ಲ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಬರೆದಿದ್ದಾರೆ ಎನ್ನುತ್ತಾರೆ. 2011ರಲ್ಲಿ ಬರೆದ ಕರಾರನಲ್ಲಿ ವಿಚಾರಗಳನ್ನು ನೀವು ತಿಳಿದುಕೊಂಡು ಸಾಕ್ಷ್ಯ ಹೇಳುತ್ತಿದ್ದಿರೋ ಏನು ಎಂದರೆ ಸಾಕ್ಷಿ ಉತ್ತರಿಸುತ್ತಿಲ್ಲ. 2011ರಲ್ಲಿ ಮಲ್ಲಪ್ಪ ಬಳೇಗಾರರವರ ಮನೆಯಲ್ಲಿ ವ್ಯವಹಾರಕ್ಕೆ ಕುಳಿತಿದ್ದೆವು. ಬಾವಿ ಕಟ್ಟಿಸುವುದಲಕ್ಕೆ, ಪೈಪ್ ಲೈನ್ ಹಾಕಿಸಿಕೊಳ್ಳುವುದಕ್ಕೆ ಹಣ ಅವಶ್ಯಕತೆ ಇದೆ ಎಂದು ಹೊಲ ಮಾರುತ್ತೇನೆ ಎಂದು ಸಿದ್ದಪ್ಪ ಮತ್ತು ಅವರ ಹೆಂಡತಿ ಹೇಳಿದರು. ಅವರ ತಾಯಿ, ತಂಗಿ ಮತ್ತು ಮಕ್ಕಳನ್ನು ಕರೆಯಿರಿ ಎಂದು ನಾನು ಹೇಳಿದೆ, ಅದಕ್ಕೆ ಸಿದ್ದಪ್ಪ ನನ್ನ ಹೆಸರಿನಲ್ಲಿ ಹೊಲ ಇದೆ ನಾನು ಮತ್ತು ನನ್ನ ಹೆಂಡತಿ ಬರೆದು ಕೊಡುತ್ತೇವೆ ಎಂದು ಹೇಳಿದರು. ಅವರು ಬಂದರೆ ಮಾತ್ರ ವ್ಯವಹಾರ ಮಾತಾಡುತ್ತೇವೆ ಎಂದು ನಾನು ಅವರಿಗೆ ಹೇಳಲಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ